**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್  5/2023**

ಪಿ  ಡಬ್ಲ್ಯೂ -2

**ದಿನಾಂಕ 13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಶ್ರೀ ಪಿ.ಎಲ್.ಕೆ. 1, 4 ಮತ್ತು 5 ನೇ ಪ್ರತಿವಾದಿಗಳ ಪರ ವಕೀಲರುಃ**

ನನ್ನ ಮದುವೆಯಾಗಿ 35-40 ವರ್ಷಗಳಾಗಿವೆ. ನನ್ನನ್ನು ಕೆ.ಆರ್.ನಗರಕ್ಕೆ ಮದುವೆ ಮಾಡಿಕೊಟ್ಟಿದ್ದು ನಾನು ಚುಂಚನಕಟ್ಟೆಯಲ್ಲಿ ವಾಸವಾಗಿದ್ದೇನೆ.  ನನ್ನ ಗಂಡ ನನ್ನ ಜೊತೆಯಲ್ಲಿ ಚುಂಚನಕಟ್ಟೆಯಲ್ಲಿಯೇ ವಾಸವಾಗಿದ್ದಾರೆ. 1ನೇ ಪ್ರತಿವಾದಿ ಮದುವೆಯಾಗಿ 50 ವರ್ಷಗಳಾಗಿವೆ. ಪ್ರಸ್ತುತ ಈಗ್ಗೆ 20 ವರ್ಷಗಳ  ಹಿಂದಿನಿಂದ 1ನೇ ಪ್ರತಿವಾದಿ ಪ್ರತ್ಯೇಕವಾಗಿ ವಾಸವಾಗಿದ್ದಾರೆ. ನಾನು ನಮ್ಮ ತಮ್ಮ ಕೃಷ್ಣ ಹಾಗೂ ನಮ್ಮ ತಾಯಿ ರಂಗಮ್ಮ ಎಲ್ಲರೂ ಒಂದೇ ಮನೆಯಲ್ಲಿ ವಾಸವಾಗಿದ್ದಾರೆ.

2. 1ನೇ ಪ್ರತಿವಾದಿ ಒಂದೇ ಜಮೀನಿನಲ್ಲಿಯೇ ಬೇರೆ ಮನೆಯನ್ನು ಮಾಡಿಕೊಂಡು ಬೇರೆ ವಾಸವಾಗಿದ್ದಾರೆ. ಈ ದಾವೆಯನ್ನು ವಾದಿಯು ಸರ್ವೆ ನಂಬರ 68 ಕ್ಕೆ ಸಂಬಂಧಿಸಿದಂತೆ ವಾದಿಗಳು ಸಲ್ಲಿಸಿರುತ್ತಾರೆ. ಸದರಿ ಜಮೀನಿನ ವಿಸ್ತೀರ್ಣ 1 ಎಕರೆ 20 ಗುಂಟೆ. ಸದರಿ ಜಮೀನಿನ ಚೆಕ್ ಬಂದಿ ನನಗೆ ಗೊತ್ತಿಲ್ಲ. ಸದರಿ ಜಮೀನು ಮೂಲತಃ ಸರ್ಕಾರಿ ಜಮೀನು ಎಂದರೆ ಸರಿ. ಸದರಿ ಜಮೀನನ್ನು 1992 ನೇ ಇಸವಿಯಲ್ಲಿ 1ನೇ ಪ್ರತಿವಾದಿಗೆ ಮಂಜೂರು ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ತಂದೆಗೆ ಮಂಜೂರು ಮಾಡಿದ್ದರು ಎಂದು ತಿಳಿಸಿರುತ್ತಾರೆ.

3. ಸದರಿ ಜಮೀನಿಗೆ ಸಂಬಂಧಿಸಿದ ದಾಖಲೆಗಳು ನಮ್ಮ ಅಣ್ಣನ ಬಳಿ ಇದ್ದು ನಾನು ದಾಖಲೆಗಳನ್ನು ನೋಡಿರುವುದಿಲ್ಲ.  ಪ್ರಸ್ತುತ ಸದರಿ ಜಮೀನಿನ ಖಾತೆಯು ಪ್ರತಿವಾದಿಯ ಹೆಸರಿನಲ್ಲಿದ್ದು ಅವರೆ ಕಂದಾಯವನ್ನು ಪಾವತಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನಮ್ಮ ತಂದೆಸತ್ತ ನಂತರ ಮೋಸದಿಂದ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ನಮ್ಮ ತಂದೆ ಸತ್ತು 10 ವರ್ಷಗಳಾಗಿರಬಹುದು ನನಗೆ ನಿಖರವಾಗಿ ಗೊತ್ತಿಲ್ಲ.

4. ನಮ್ಮ ತಂದೆ ಜೀವಂತವಾಗಿದ್ದಾಗ ಸರ್ಕಾರದಿಂದ ನನಗೆ ಆಶ್ರಯ ಯೋಜನೆಯಡಿಯಲ್ಲಿ ಮನೆ ಮಂಜೂರಾಗಿದೆ. ಸದರಿ ಮನೆಯು ಜಮೀನಿನ ಒಳಗಡೆ ಇದೆ. ಸದರಿ ಮನೆಯನ್ನು ಈ ದಾವೆಯಲ್ಲಿ ಸೇರಿಸಿದ್ದಾರೋ ಇಲ್ಲಮೋ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ನಮ್ಮ ಅಣ್ಣ 1ನೇ ಪ್ರತಿವಾದಿ ಅವರೆ ಸ್ವಂತ ಆರ್.ಸಿ.ಸಿ ಮನೆಯನ್ನು ನಿರ್ಮಾಣ ಮಾಡಿದ್ದಾರೆ.

5. 2 ನೇ ವಾದಿ ಕೃಷ್ಣ ಪ್ರಸ್ತುತ ಶ್ರೀರಾಮ ದೇವಸ್ಥಾನದಲ್ಲಿ ನಮ್ಮ ತಂದೆ ಮೃತ ಪಟ್ಟ ನಂತರ ಕೆಲಸ ಮಾಡಿಕೊಂಡು ಇದ್ದಾರೆ. ನಮ್ಮ ತಂದೆ ಅವರು ಜೀವಂತವಾಗಿದ್ದಾಗ ಅವರು ಸಹ ಶ್ರೀರಾಮ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮ ತಂದೆ ಮತ್ತು 2 ನೇ ವಾದಿ ಶ್ರೀರಾಮ ದೇವಸ್ಥಾನದಲ್ಲಿ ಕೆಲಸ ಮಾಡುತ್ತಿದ್ದರು ಎಂದು ತೋರಿಸಲು ದಾಖಲೆ ಇದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ.

6. 1 ನೇ ಪ್ರತಿವಾದಿ ವೆಂಕಟರಾಮು ಶ್ರೀರಾಮ ದೇವಸ್ಥಾನದಲ್ಲಿ 40-50 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಕೆಲಸವನ್ನು ಗುರುತಿಸಿ ಸರ್ಕಾರದವರು 1992 ರಲ್ಲಿ 1 ನೇ ಪ್ರತಿವಾದಿ ದಾವಾ ಸ್ವತ್ತನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು 1 ನೇ ಪ್ರತಿವಾದಿ ಸಕ್ಕರೆ ಖಾರ್ಕಾನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ತಿಳಿಸಿರುತ್ತಾರೆ. ಎಷ್ಟನೇ ಇಸವಿಯವೆರಗೆ ಸಕ್ಕರೆ ಖಾರ್ಕಾನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ.

7. 1 ನೇಪ್ರತಿವಾದಿ ಸರ್ಕಾರದಿಂದ ದಾವಾ ಸ್ವತ್ತನ್ನು ಮಂಜೂರು ಮಾಡಿದಾಗಿನಿಂದ 1 ನೇ ಪ್ರತಿವಾದಿ ಖಾತೆಯನ್ನು ಬದಲಾಯಿಸಿಕೊಂಡು ಸ್ವಾಧೀನದಲ್ಲಿರುವ ವಿಚಾರ ನನಗೆ ತಿಳಿದ್ದಿದ್ದರು ಸಹ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 6 ನೇ ತರಗತಿಯವೆರೆಗ ವಿದ್ಯಾಭ್ಯಾಸವನ್ನು ಮಾಡಿದ್ದೇನೆ. ನಾನು ಪ್ರಸ್ತುತ ಚುಂಚನಕಟ್ಟೆ ಬಸ್ ನಿಲ್ದಾಣದಲ್ಲಿ ಚಿಲ್ಲರೆ ಅಂಗಡಿಯನ್ನು ಇಟ್ಟುಕೊಂಡು ಜೀವನವನ್ನು ನಡೆಸುತ್ತಿದ್ದೆನೆ.

8. ನಾನು ಮತ್ತು ವಾದಿಗಳು ಒಟ್ಟಿಗೆ ವ್ಯವಹಾರವನ್ನು ಮಾಡುತ್ತಿದ್ದು 1 ನೇ ಪ್ರತಿವಾದಿ ಬೇರೆ ವ್ಯವಹಾರವನ್ನು ಮಾಡುತ್ತಿದ್ದಾರೆ. 2 ನೇ ವಾದಿ ಕೃಷ್ಣ ಸಾಲೀಗ್ರಾಮದ ರಸ್ತೆಯಲ್ಲಿರುವ ಜನತಾ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಆದಿಶಕ್ತಿ ಬನಮ್ಮ

ಕಾಳಮ್ಮ ದೇವಸ್ಥಾನದ ಇದೆ ಎಂದರೆ ಸರಿ. ಈ ಹಿಂದೆ ಸದರಿ ಸ್ಥಳದಲ್ಲಿ ಒಂದು ಶೆಡ್ ಇತ್ತು ಎಂದರೆ ಸರಿ. ಸದರಿ ದೇವಸ್ಥಾನದ ನಿರ್ಮಾಣದ ಕಾರ್ಯವನ್ನು 1 ನೇ ಪ್ರತಿವಾದಿ ಮಾಡಿಸಿದ್ದು ನಾವು ಸಹ ಜೊತೆಯಲ್ಲಿ ಇದ್ದೇವು.

**9.** 1 ನೇ ಪ್ರತಿವಾದಿ ತಮ್ಮ ಸ್ವಂತ ಹಣದಿಂದ ದೇವಸ್ಥಾನವನ್ನು ನಿರ್ಮಾಣ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ 09-03-2017 ರಂದು ನೋಂದಾಯಿತ ವಿಭಾಗ ಪತ್ರದ ಮೂಲಕ ನಮ್ಮ ತಾಯಿ, ಮತ್ತು 3 ಜನ ಸಹೋದರರು ಸಾಲೀಗ್ರಾಮ ರಸ್ತೆಯಲ್ಲಿರುವ ಮನೆಯನ್ನು ವಿಭಾಗ ಮಾಡಿಕೊಂಡುವ ವಿಚಾರ ನನಗೆ ಗೊತ್ತು. ದಾವಾ ಸ್ವತ್ತನ್ನು ಸದರಿ ವಿಭಾಗ ಪತ್ರದಲ್ಲಿ ಸೇರಿಸಿರುವುದಿಲ್ಲ.

**10**. ದಾವಾ ಸ್ವತ್ತು 1 ನೇಪ್ರತಿವಾದಿ ಸ್ವಂತ ಜಮೀನಾದ ಕಾರಣ ಅದನ್ನು ದಿಃ 09-03-2017 ರ ವಿಭಾಗ ಪತ್ರದಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನಾವು ಸದರಿ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ದಾವಾ ಸ್ವತ್ತಿನಲ್ಲಿ ಭಾಗವನ್ನುಕೊಡುವಂತೆ ಕೇಳಿರುತ್ತೇವೆ. ಈ ದಾವೆಯನ್ನು ಸಲ್ಲಿಸುವ ಕಾಲದಲ್ಲಿ ವಾದಿಗಳು ದಾವೆಯನ್ನು ಹಾಕುವ ಕುರಿತು ನನಗೆ ತಿಳಿಸಿರುತ್ತಾರೆ. ನನಗೆ ದಾವೆಯಲ್ಲಿ ತಕರಾರು ಪತ್ರ ಸಲ್ಲಿಸಲು ತೊಂದರೆ ಇರಲಿಲ್ಲ.

**11**. ನನ್ನ ಪ್ರಮಾಣ ಪತ್ರದಲ್ಲಿನ ವಿಚಾರಗಳು ನನಗೆ ಗೊತ್ತು. ನಾನೇ ಮಾಹಿತಿಯನ್ನು ನೀಡಿ ಬರೆಸಿರುತ್ತೇನೆ. ನಾವು ದಾವಾ ಸ್ವತ್ತಿನಲ್ಲಿ ನಿರ್ಮಿಸಿರುವ ಮನೆಯ ದಾಖಲೆಗಳನ್ನು ಒದಗಿಸಿದ್ದೇವೆ. ನಾವು ದಾವಾ ಸ್ವತ್ತಿನಲ್ಲಿಯಾವುದೇ ಮನೆಯನ್ನು ನಿರ್ಮಾಣ ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 1992 ನೇ ಇಸವಿಯಲ್ಲಿ ಪ್ರತಿವಾದಿಗೆ ಮಂಜೂರು ಮಾಡುವ ಕಾಲದಲ್ಲಿ ನಾವು ಯಾವುದೇ ತಕರಾರನ್ನು ಮಾಡಿರುವುದಿಲ್ಲ ಎಂದರೆ ನಮಗೆ ಆ ಸಮಯದಲ್ಲಿ ಅವರ ಹೆಸರಿಗೆ ಮಾಡಿಸಿಕೊಂಡಿರುವುದು ನಮಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ.

12. 1 ನೇ ಪ್ರತಿವಾದಿಯ ಖಾತೆಯನ್ನು ಪ್ರಶ್ನಿಸಿ ಮೇಲ್ಮನವಿಯನ್ನು ಸಲ್ಲಿರುವ ವಿಚಾರ ನನಗೆ ಗೊತ್ತಿಲ್ಲ. ನಾವು ಚಿಕ್ಕವರಿದ್ದಾಗ ಎಲ್ಲರೂ ಒಟ್ಟಿಗೆ ಪೂಜೆ ಮಾಡುತ್ತಿದ್ದು ಪ್ರಸ್ತುತ 1 ನೇ ಪ್ರತಿವಾದಿ ನಮಗೆ ಬರಬೇಡಿ ಎಂದು ಹೇಳುತ್ತಿದ್ದಾರೆ. ದಾವಾ ಸ್ವತ್ತಿನಲ್ಲಿ ಯಾವುದೇ ಅಧಿಕಾರ ಇರದೇ ಇದ್ದರೂ ಸಹ ಅಕ್ರಮ ಲಾಭ ಪಡೆಯಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇರದ ಕಾರಣ ನಾನು ತಕರಾರನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ದಾವಾ ಜಮೀನಿನಲ್ಲಿ ಸ್ವಾಧೀನದಲ್ಲಿರುವ ಕುರಿತು ದಾಖಲೆಗಳು ಇವೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಲು ತೊಂದರೆ ಇಲ್ಲ.

ಈ ಹಂತದಲ್ಲಿ 1, 4 ಮತ್ತು 4 ನೇ ಪ್ರತಿವಾದಿ ಪರ ವಕೀಲರು ಸಂಪೂರ್ಣವಾಗಿ ಪಾಟೀ ಸವಾಲನ್ನು ಮಾಡಿರುತ್ತಾರೆ.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ